ಅವಕಾಶವು ನನಗೆ ಸಿಕ್ಕಿದೆ. ಮಾನ್ಯ ಸುರೇಶ್‌ಕುಮಾರ್‌ರವರ ಪ್ರಶ್ನೆ ಅಂದರೆ ನಮ್ಮ ಸರ್ಕಾರದ ಜೊತೆಗೆ ಸ್ವೀಡನ್ ಸರ್ಕಾರದವರ ಒಪ್ಪಂದ ಆಗಿದೆಯೇ ಎಂಬುದು. ಆ ಒಪ್ಪಂದವು ಆಗಿಲ್ಲ. ಮಾಹಿತಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಆ ರಾಷ್ಟ್ರದಿಂದ ಬಂದಂಥ ಅಧಿಕಾರಿಗಳು ಮತ್ತು ಸಂಬಂಧಪಟ್ಟವರು, ನಮ್ಮ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವಂಥ ಅಧಿಕಾರಿಗಳು ಮತ್ತು ಸಂಬಂಧಪಟ್ಟವರು, ನಮ್ಮ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವಂಥ ಅಧಿಕಾರಿ ಮಿತ್ರರು ಕುಳಿತು ಚರ್ಚೆ ನಡೆಸಿದ ನಂತರವೇ ನಾವು ನೀಲಿನಕ್ಷೆಯನ್ನು ಸಿದ್ಧಪಡಿಸಿದ್ದೇವೆ ಹಾಗೂ ಸೂಕ್ತವಾದ ರಸ್ತೆಗಳನ್ನು ನಾವು ಗುರುತಿಸಿದ್ದೇವೆ. ಮಾನ್ಯ ಸಿಂಧ್ಯರವರು ಹೇಳಿದ ಎರಡು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದನ್ನು ಕೂಡ ನಾನು ಒಪ್ಪುತ್ತೇನೆ. ಯಾವ ಯಾವ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಾಡಿಸುತ್ತೇವೆ ಎಂಬ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಮಾನ್ಯ ಸುರೇಶ್‌ಕುಮಾರ್‌ರವರಿಗೆ ನಾನು ಒದಗಿಸಿಕೊಡುತ್ತೇನೆ.

ಆಶ್ರಯ ಯೋಜನೆ

70 - ಶ್ರೀ ಬಸವರಾಜ್ ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಆಶ್ರಯ ಯೋಜನೆಯಲ್ಲಿ ಮನೆಗಳನ್ನು ನೀಡುವ ಕಾರ್ಯಕ್ರಮ ಎಂದಿನಿಂದ ಪ್ರಾರಂಭವಾಗುವುದು?*

ಆ) *ಪ್ರತಿ ತಾಲ್ಲೂಕಿಗೆ ಲಭ್ಯವಾಗುವ ಮನೆಗಳೆಷ್ಟು?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಸಧ್ಯಕ್ಕೆ ಆಶ್ರಯ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಮಿತಿಗಳು ಅಸ್ಥಿತ್ವಕ್ಕೆ ಬಂದ ನಂತರ ಅರ್ಹ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲು ಪ್ರಾರಂಭಿಸಲಾಗುವುದು.

ಆ) 30,000 ಗ್ರಾಮೀಣ ಆಶ್ರಯ ಮನೆಗಳ ಜಿಲ್ಲಾವಾರು ಹಂಚಿಕೆಯನ್ನು ಮಾಡಲಾಗುತ್ತಿದೆ. ಇದಲ್ಲದೆ. 70,000 ಗ್ರಾಮೀಣ ಆಶ್ರಯ ಮನೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಹೆಚ್.ಸಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಆಶ್ರಯ ಸಮಿತಿಗಳ ರಚನೆ ಮಾಡಿ ಆಶ್ರಯ ಮನೆಗಳನ್ನು ಹಂಚುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆಶ್ರಯ ಸಮಿತಿಯನ್ನು ರಚನೆ ಮಾಡುವಾಗ ಕ್ಷೇತ್ರದ ಶಾಸಕರ ಶಿಫಾರಸ್ಸಿನ ಮೇಲೆ ರಚಿಸುತ್ತೀರಾ ಎಂಬುದನ್ನು ಕೇಳಬಯಸುತ್ತೇನೆ. ಎರಡನೆಯದಾಗಿ ಜಿಲ್ಲಾವಾರು ಮನೆಗಳನ್ನು ಹಂಚುವಾಗ ಸುಮಾರು ಒಂದು ಲಕ್ಷ ಗ್ರಾಮೀಣ ಮನೆಗಳನ್ನು ಹಂಚುವಾಗ ಯಾವ ಆಧಾರದ ಮೇಲೆ ಜಿಲ್ಲೆಯಲ್ಲಿ ಮತ್ತು ತಾಲ್ಲೂಕಿನಲ್ಲಿ ಹಂಚುತ್ತೀರಿ? 1999-2000 ಸಾಲಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕಿಗೆ ನಿಗದಿಪಡಿಸಿದ

ಆಶ್ರಯ ಮನೆಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ಪೂರ್ತಿ ಕೆಲಸ ಮುಗಿಸಿ ಹಣ ಪಾವತಿ ಮಾಡಿರುವ ಮನೆಗಳು ಎಷ್ಟು? ಈ ತಾಲ್ಲೂಕಿನಲ್ಲಿ ಅನರ್ಹ ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ಕುರಿತು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) : ಕಳೆದ ಚುನಾವಣೆಯ ಸಮಯದಲ್ಲಿ ನೀತಿಸಂಹಿತೆ ಬಂದ ಮೇಲೆ ಎಲ್ಲಾ ಸಮಿತಿಗಳ ರಚನೆ ಸ್ಟಾಪ್ ಆಗಿದೆ. ಅದಾದಮೇಲೆ ಹೈಕೋರ್ಟ್‌ನಿಂದ ಈ ಆಶ್ರಯ ಸ್ಕೀಂ ರದ್ದಾಗಿದೆ ಎಂದು ಒಂದು ಜಡ್ಜ್‌ಮೆಂಟಾಗಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ನಿವೇಶನ ಹಂಚಲಿಕ್ಕೆ ಯಾವ ತಡೆಯಾಜ್ಞೆ ನೀಡಿಲ್ಲ. ಆಶ್ರಯ ಸಮಿತಿ ತೀರ್ಮಾನ ಮಾಡಿರುವ ಪ್ರಕರಣಗಳಲ್ಲಿ ಏತಕ್ಕಾಗಿ ಇನ್ನೂ ವಿತರಣೆ ಮಾಡಿಲ್ಲ ? ಅದಕ್ಕೂ ನೀವು ತಡೆಯಾಜ್ಞೆ ನೀಡಿದ್ದೀರಿ. ಆಶ್ರಯ ಸಮಿತಿ ನಿವೇಶನ ವಿತರಣೆ ಮಾಡುತ್ತದೆ. ಆದರೆ ಮನೆಗಳನ್ನು ವಿತರಣೆ ಮಾಡಲು ಯಾವುದೇ ತಡೆಯಾಜ್ಞೆಯಿಲ್ಲ. ಹೊಸ ಕಮಿಟಿ ಮೀಟ್ ಮಾಡುವಂತಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಕಮಿಟಿ ಮಾಡಿರುವುದು ತಪ್ಪು ಎಂದು ಹೈಕೋರ್ಟ್ ಹೇಳಿದೆ, ಸರ್ಕಾರ ಸುಪ್ರೀಂಕೋರ್ಟ್‌ಗೆ ಹೋಗಿದೆ.

ಶ್ರೀ ಸಿ. ಭೈರೇಗೌಡ : ಇದರಲ್ಲಿ ಎರಡು ಅಂಶಗಳಿವೆ. ಒಂದು, ನಿವೇಶನ ಹಂಚುವುದು ಮತ್ತೊಂದು ಫಲಾನುಭವಿಗಳನ್ನು ಗುರ್ತಿಸಿ ಅವರಿಗೆ ಮನೆ ಹಂಚುವುದು- ನನ್ನ ತಿಳುವಳಿಕೆ ಪ್ರಕಾರ ಹೈಕೋರ್ಟ್ ತಡೆಯಾಜ್ಞೆ ಇರುವುದು ನಿವೇಶನ ಹಂಚುವುದರ ವಿರುದ್ಧ, ಅದರ ಬಗ್ಗೆ ಪ್ರಶ್ನೆ ಮಾಡಿದ್ದುದು ಕೂಡ; ಹಣ ಕೊಟ್ಟು ಮನೆಗಳನ್ನು ಕಟ್ಟಿಸುವುದಕ್ಕಲ್ಲ. ಬಡವರಾದ ಕೆಲವರಿಗೆ ಸಣ್ಣ ನಿವೇಶನ ಇರುತ್ತದೆ, ಅಂಥವರಿಗೆ ಮನೆ ಕಟ್ಟಿಕೊಳ್ಳುವುದಕ್ಕೇನೂ ಅಡ್ಡಿಯಿಲ್ಲ. ಮಾನ್ಯ ಸಚಿವರು ಇವನ್ನೆಲ್ಲ ಗಮನಿಸಿ ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ಖಮರುಲ್ ಇಸ್ಲಾಂ : ನಾನು ಉತ್ತರ ಕೊಡುತ್ತೇನೆ, ಅದಾದಮೇಲೆ ಅವರು ಪೂರಕ ಪ್ರಶ್ನೆ ಕೇಳಲಿ. ಈ ವಿಚಾರದಲ್ಲಿ ಸರ್ಕಾರ ಕೂಡಲೇ ಸುಪ್ರೀಂ ಕೋರ್ಟ್‌ಗೆ ಹೋಗಿದೆ; ಅಲ್ಲಿ ಸ್ಟೇ ತೆಗೆದು ಕೊಂಡಿದ್ದೇವೆ. ಮತ್ತೆ ಭೂ ಮಂಜೂರು ನಿಯಮ ಏನಿದೆ ಅದನ್ನೂ ತಿದ್ದುಪಡಿ ಮಾಡಿದ್ದೇವೆ. Now decks are very clear. ಇನ್ನೂ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ, ಹಿಂದಿನ ಸರ್ಕಾರದಲ್ಲಿ ತಾಲ್ಲೂಕುವೈಸ್ ಮತ್ತು ಟೌನ್‌ವೈಸ್ ಆಶ್ರಯ ಸಮಿತಿ ನಿರ್ಮಾಣವಾಗಿತ್ತು. ನಮ್ಮ ಸರ್ಕಾರ ಮತಕ್ಷೇತ್ರವಾರು ಮಾಡಿದೆ, ಅದರಲ್ಲಿ ಎಲ್ಲ ಎಂಎಲ್‌ಎಗಳನ್ನೂ ಚೇರ್ಮನ್ ಮಾಡಿದ್ದಾರೆ. ಹಿಂದುಳಿದ ವರ್ಗದಿಂದ 1, ಎಸ್‌ಸಿಎಸ್‌ಟಿ-1, ಜನರಲ್ ಕಮ್ಯುನಿಟಿ-1 ಮತ್ತು ಮೈನಾರಿಟೀಸ್ 1- ಈ ನಾಲ್ಕರಲ್ಲಿ ಒಬ್ಬ ಮಹಿಳೆ ಇರತಕ್ಕದ್ದು ಎಂದು ನಿರ್ಣಯಿಸಿ ಇದೇ 31 ರೊಳಗೆ ಸಮಿತಿಗಳನ್ನು ರಚನೆ ಮಾಡುತ್ತಿದ್ದೇವೆ. ನಾನು ಇನ್ನೂ ಒಂದು ನಿರ್ಣಯ ತೆಗೆದುಕೊಂಡು ಜನಸಂಖ್ಯೆ ಪ್ರಕಾರ, ನಿರ್ವಸಿತರು ಎಷ್ಟು, ನಿವೇಶನರಹಿತರು ಎಷ್ಟು ಎಂದು ಒಂದು ಸರ್ವೆ ಏನು

ಇದೆ, ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಹಿಂದಿನ ವರ್ಷಗಳಲ್ಲಿ ಯಾರ್ಯಾರಿಗೆ ಅನ್ಯಾಯವಾಗಿದೆ, ಪಕ್ಷಪಾತವಾಗಿದೆ ಅದು ನನ್ನ ಗಮನದಲ್ಲಿರುತ್ತದೆ, ಆಮೇಲೆ ಅಲಾಟ್ಮೆಂಟ್ ಕೊಡುತ್ತೇವೆ.

ಶ್ರೀ ಜಗದೀಶ ಶೆಟ್ಟರ್ : ಅಧ್ಯಕ್ಷರೇ, ನೈಟ್ಸ್, ಲ್ಯಾಂಡ್ ಅಕ್ವಿಜಿಶನ್ ಬಗ್ಗೆ ಕೋರ್ಟ್‌ಗೆ ರಿಟ್ ಹೋಗಿರುವುದು ಇದೆ. ಫಲಾನುಭವಿಗಳನ್ನು ಆಯ್ಕೆಮಾಡಿ ಮನೆ ಹಂಚುವುದರ ವಿರುದ್ಧವಲ್ಲ. ನಾಲ್ಕೈದು ತಿಂಗಳ ಹಿಂದೆ ಎಲ್ಲ ಕಾರ್ಯಗಳು ನಿಂತುಬಿಟ್ಟಿದ್ದವು, ಅದರೆ ಚುನಾವಣೆಯಾದ ನಂತರ ಸರ್ಕಾರ ಯಾವ ಕಮಿಟಿಯನ್ನೂ ಮಾಡಲಿಲ್ಲ. ರಿಟ್ ಫಿಟಿಶನ್ ಪೆಂಡಿಂಗ್‌ನಲ್ಲಿ ಇತ್ತು. ಹೈಕೋರ್ಟ್ ಯಾವಾಗ ತೀರ್ಪು ಕೊಟ್ಟರೋ, ಈ ಯೋಜನೆ ರದ್ದು ಮಾಡಿದರೋ ಆಗ ಸರ್ಕಾರದವರು ಸುಪ್ರೀಂಮ್‌ಕೋರ್ಟ್‌ಗೆ ಅಪೀಲ್ ಹೋದರು. ಅಲ್ಲಿ ಸ್ಟೇ ಇತ್ತು. ಇಷ್ಟರೊಳಗೆ ಸಮಿತಿಗಳ ರಚನೆ ಮಾಡಬೇಕಾಗಿತ್ತು, ಸರ್ಕಾರ ಬಂದು 5 ತಿಂಗಳಾಯಿತು, ಕೆಲಸವೂ ಏನೂ ಆಗಿಲ್ಲ ಎಲ್ಲ ಹೆಲ್ಡ್‌ಅಪ್ ಆಗಿಬಿಟ್ಟಿದೆ. ಈಗ ಆಶ್ರಯ ಸಮಿತಿ ಏಕೆ ಮಾಡಲಿಲ್ಲವೆಂಬ ಪ್ರಶ್ನೆ ನಮ್ಮ ಮುಂದೆ ಇದೆ. ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟು ಒಂದು ತಿಂಗಳಾಯಿತು.

Sri. QUMARUL ISLM :- The High Court has said "Ashraya Scheme is quashed. Hence there is no fresh selection of the beneficiaries". ಈಗ ವಿರೋಧಪಕ್ಷದ ನಾಯಕರು ಹೇಳಿದಂತೆ, now the decks are cleared. ಈ ಸದನದಲ್ಲಿ ನಾನು ಆಶ್ವಾಸನೆ ಕೊಡುತ್ತೇನೆ. 31 ರೂಳಗೆ ಸಮಿತಿ ರಚನೆ ಮಾಡುತ್ತಿದ್ದೇನೆ. ಮತ್ತೆ 2000-2001ರಲ್ಲಿ ಎರಡು ಲಕ್ಷ ರೂರಲ್ ಆಶ್ರಯ, ಅಂಬೇಡ್ಕರ್ ಯೋಜನೆ-ಗುರಿ ಇಟ್ಟುಕೊಂಡಿದ್ದೇವೆ. ಆ ಪ್ರಕಾರ ಮತಕ್ಷೇತ್ರ ಅನುಸರಿಸಿ ಹಂಚುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಚಿವರು ಈ ಸದನವನ್ನು ಹಾದಿಗೆಳೆಯುತ್ತಿದ್ದಾರೆ ತಮ್ಮ ಉತ್ತರದ ಮೂಲಕ. ಹೇಗೆ ಅಂದರೆ, ಹೈಕೋರ್ಟ್ ಸ್ಟೇ ಕೊಟ್ಟಿರುವುದು ಸೈಟ್ಸ್ ಕುರಿತು, ಮನೆಗಳ ಬಗ್ಗೆ ಅಲ್ಲ. ಎರಡನೆಯದಾಗಿ ಪಿರಿಯಾಪಟ್ಟಣದ ಮಾನ್ಯ ಬಸವರಾಜುರವರು ಕೇಳಿರುವುದೇನೆಂದರೆ ಪ್ರತಿ ತಾಲ್ಲೂಕಿಗೂ ಲಭ್ಯವಾಗಿರುವ ಮಾಹಿತಿಗಳೆಷ್ಟು? ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಯಲ್ಲೂ ಈ ವಿಚಾರದ ಬಗ್ಗೆ ನಾನು ಹೇಳಿದ್ದೇನೆ, ಅಧಿಕಾರಿಗಳು ಮಾನ್ಯ ಸಚಿವರಿಗೆ, ಅಥವಾ ಸಚಿವರು ಅಧಿಕಾರಿಗಳಿಂದ ಸಮರ್ಪಕ ಉತ್ತರ ಪಡೆಯುತ್ತಿಲ್ಲ ಅಂತ. ಇವರು ಉತ್ತರದಲ್ಲಿ ಸದಸ್ಯರು ಕೇಳಿರದ್ದನ್ನು ಹೇಳಿದ್ದಾರೆ. 30 ಸಾವಿರ ಗ್ರಾಮೀಣ ಆಶ್ರಯ ಮನೆಗಳ ಜಿಲ್ಲಾವಾರು ಹಂಚಿಕೆ ಮಾಡಲಾಗುತ್ತಿದೆ, 70 ಸಾವಿರ ಗ್ರಾಮೀಣ ನಿವೇಶನ ಮಂಜೂರು ಮಾಡಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಯಾರು ಕೇಳಿದ್ದವರು? ನಾವು ಮುಖ್ಯವಾಗಿ ಕೇಳುವಂಥದ್ದು ಈ ಮನೆಗಳೇನಿವೆ ಇವು 1999-2000 ನೇ ಬಜೆಟ್‌ನಲ್ಲಿ ಅಲಾಟ್ ಆಗಿರುವುವು. ಅವತ್ತಿನ ಸರ್ಕಾರ ಅಲಾಟ್ ಮಾಡಿದ್ದು. ಫಲಾನುಭವಿಗಳನ್ನು ಅವತ್ತಿದ್ದ ಸಮಿತಿಗಳು ಆಯ್ಕೆ ಮಾಡಿವೆ. ಈಗ ಪ್ರಶ್ನೆ ಇರುವುದು, ಬಡವರು ದುಡ್ಡು ಕೊಡುತ್ತಾರೆಂದು ಪಾಯ ಹಾಕಿಕೊಂಡಿದ್ದಾರೆ.

ಕೆಲವರು ಗೋಡೆಗಳನ್ನು ಹಾಕಿಬಿಟ್ಟಿದ್ದಾರೆ, ಅವರಿಗೆ ಏಕೆ ದುಡ್ಡು ರಿಲೀಸ್ ಮಾಡಲಿಲ್ಲ ಅಂತ ಕೇಳಿರುವುದು. ನೀವು ಸಮಿತಿ ಮಾಡುವುದು ಮುಂದಿನ ವರ್ಷಕ್ಕೆ, ನೀವು ತಾಲ್ಲೂಕುವೈಸ್ ಮಾಡುತ್ತೀರೋ ಕ್ಷೇತ್ರವಾರು ಮಾಡುತ್ತೀರೋ ನಿಮ್ಮ ವಿವೇಚನೆಗೆ ಬಿಟ್ಟಿರುವ ವಿಚಾರ. ಆದರೆ 1999-2000 ನೇ ಇಸವಿಯಲ್ಲಿ ರಿಲೀಸಾಗಿರುವ ತಾಲ್ಲೂಕುವಾರು ಮನೆಗಳೆಷ್ಟು? ಬಡವರು ಈಗಾಗಲೇ ಗೋಡೆಗಳನ್ನು ಹಾಕಿದ್ದಾರೆ, ಅವೆಲ್ಲ ಬಿದ್ದು ಹೋಗಿಬಿಡುತ್ತದೆ, ಅದಕ್ಕೆ ನಿಮ್ಮ ಪರಿಹಾರವೇನು ಅಂತ ತಿಳಿಸಿ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : 1999-2000 ಕ್ಕೆ ಎಷ್ಟು ಮನೆಗಳನ್ನು ಮಾಡಿದ್ದೀರಿ? ಹಾಗೇಯೇ 1998-99 ಕ್ಕೆ ಮನೆಗಳನ್ನು ಕಟ್ಟಿದಲೆ ಹಣ ಡ್ರಾ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯಾ? ಯಾಕೆಂದರೆ ನನ್ನ ಕ್ಷೇತ್ರದಲ್ಲಿ ಮನೆಗಳನ್ನು ಕಟ್ಟದಲೆ ಹಣ ಡ್ರಾ ಮಾಡಿರುವ ಉದಾಹರಣೆ ಬಹಳ ಇದೆ. ಬೇರೆ ಕ್ಷೇತ್ರಗಳಲ್ಲೂ ಹಾಗೇ ಆಗಿದೆ.

ಶ್ರೀ ಖಮರುಲ್ ಇಸ್ಲಾಂ : ಆ ಬಗ್ಗೆ ನಾನು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಸಮಿತಿಗಳನ್ನು ರಚನೆ ಮಾಡುವಾಗ ಸ್ಥಳೀಯ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೀರಾ?

10.50 ಎ.ಎಂ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ನಾವು ಉತ್ತರದ ಬಗ್ಗೆ ಇಂಟರ್‌ಫಿಯರ್ ಆಗಲಿಲ್ಲ. ನಾನು ಹೇಳುವುದು, ಅವರು ನಮ್ಮನ್ನು ಕನ್‌ಸಲ್ಟ್ ಮಾಡಿ ಮಾಡುತ್ತೀರಾ ಎಂದು ಕೇಳಿದ್ದಕ್ಕೆ, ನಿಮ್ಮ ಸರ್ಕಾರ ಬಂದಾಗ ನೀವು ಮಾಡುತ್ತೀರಿ ಎಂದೆ.

(ಗೊಂದಲ)

ಅಧ್ಯಕ್ಷರು : ಅವರು ಕೇಳಿದ್ದೇನೆಂದರೆ ಆಯಾ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಗೆ ಶಾಸಕರುಗಳನ್ನು ಸದಸ್ಯರನ್ನಾಗಿ ಮಾಡುತ್ತೀರಿ. ಅವರನ್ನು ಮೆಂಬರ್ಸ್ ಎಂದು ಮಾಡುವಾಗ ಅವರನ್ನು ಕನ್‌ಸಲ್ಟ್ ಮಾಡಿ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ : ಅವರನ್ನು ಕನ್‌ಸಲ್ಟ್ ಮಾಡಿ ಮಾಡುತ್ತೇನೆ.

(ಗೊಂದಲ)

SRI P.G.R. SINDHYA : The Minister should replay to all the questions. ಅವರು ಏನು ಉತ್ತರವನ್ನು ಹೇಳಿದರು ಗೊತ್ತಾ? ನಿಮ್ಮ ಸರ್ಕಾರದಲ್ಲಿ ಏನು ಮಾಡಿದರೋ ಅದನ್ನೇ ನಾವು ಮಾಡಿದ್ದೇವೆ ಎಂದು ಹೇಳಿದರು. ನೀವು ಉತ್ತರ ಕೊಡಿ.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ಅಷ್ಟು ಎಮೋಷನಲ್ ಆಗಿ ಏಕೆ ಮಾತನಾಡುತ್ತಿದ್ದೀರಿ. ನನಗೂ ಕನ್ನಡ ಬರುತ್ತದೆ. ನಾನು ಕೂಡ ಕನ್ನಡಿಗ ಇದ್ದೇನೆ. ನಾನು ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ತಾವು ಇಂಗ್ಲೀಷನ್ನು ಉಪಯೋಗಿಸುವುದಿಲ್ಲವೇ?

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕನ್ನಡ ಕಲಿಯುವುದಕ್ಕೆ ಯೋಗ್ಯತೆ ಇಲ್ಲದಿದ್ದರೆ ಮಂತ್ರಿಗಳು ಏಕೆ ಆಗಬೇಕು. ಇದು ಕರ್ನಾಟಕ; ಇಲ್ಲಿ ಕನ್ನಡಕ್ಕೇ ಪ್ರಾತಿನಿಧ್ಯ. ನಮಗೆ ಕೇಳುವ ಹಕ್ಕು ಇದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಸ್ಪೆಸಿಫಿಕ್ ಆಗಿ ಪ್ರಶ್ನೆಯನ್ನು ಕೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ತಾವು ಅಧ್ಯಕ್ಷರ ಕಡೆ ನೋಡಿ ಮಾತನಾಡಿ. ಸದಸ್ಯರ ಕಡೆ ನೋಡಿ ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಕೊಡುತ್ತಿದ್ದರು. ಮಧ್ಯದಲ್ಲಿ ಬೇರೆ ಸದಸ್ಯರುಗಳು ಎದ್ದು ನಿಂತು ಮಾತನಾಡಿದ್ದರಿಂದ ಗದ್ದಲವಾಯಿತು. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸುಮ್ಮನೆ ಇದ್ದರೆ ಸರಿಹೋಗುತ್ತದೆ. ಅವರು ಕನ್ನಡವನ್ನು ಕಲಿತುಕೊಳ್ಳುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ನೀವು ಸ್ವಲ್ಪ ತಾಳ್ಮೆಯಿಂದ ಇರಿ. ಅವರಿಗೆ ಒಂದು ತಿಂಗಳು ಎರಡು ತಿಂಗಳು ಟೈಮ್ ಕೊಡಿ, ಅವರು ಕಲಿಯುತ್ತಾರೆ. ಅಷ್ಟರಲ್ಲಿ ನೀವು ಅವಸರ ಬೀಳಬೇಡಿ. ಆದಷ್ಟು ಬೇಗನೆ ಸ್ವಚ್ಛವಾದ ಕನ್ನಡವನ್ನು ಅವರು ಕಲಿಯುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಒಂದು ತಿಂಗಳು, ಎರಡು ತಿಂಗಳು ಟೈಮಲ್ಲ, ಅವರಿಗೆ 20 ವರ್ಷ ಟೈಮ್ ಕೊಟ್ಟಿದ್ದೇವೆ.

ಒಬ್ಬ ಮಾನ್ಯ ಸದ್ಯಸರು : ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಕನ್ನಡ ಭಾಷೆಯ ಬಗ್ಗೆ ನಮಗೆಲ್ಲರಿಗೂ ಗೌರವ ಇದೆ. ಇದು ನಮ್ಮ ಮಾತೃಭಾಷೆ. ನಮಗೆಲ್ಲರಿಗೂ ಕನ್ನಡ ಕಲಿಯುವ

ಬಗ್ಗೆ ಆಸಕ್ತಿ ಇದೆ. ಪತ್ರಿಕೆಗಳಲ್ಲಿ ಪ್ರಚಾರದ ಲಾಭ ಪಡೆಯುವ ವಿಚಾರವನ್ನು ತಾವು ಮಾಡಬಾರದು. ಮಾನ್ಯ ಶಂಕರಲಿಂಗೇಗೌಡರು ಕವಿಗಳು, ಅವರಿಗೆ ಮಾತ್ರ ಕನ್ನಡ ಬರುತ್ತದೆ ಇನ್ನುವ ವಿಚಾರವನ್ನು ಅವರು ಮಾತನಾಾವುದು ಬೇಡ. ಕನ್ನಡ ಕಲಿಯತಕ್ಕಂಥಾದ್ದರ ಬಗ್ಗೆ ನಮ್ಮದೂ ಅಷ್ಟೇ ಆಸಕ್ತಿ ಇದೆ. ಈ ಕನ್ನಡ ಭಾಷೆಗೆ ಎಲ್ಲೆಲ್ಲೂ ಗೌರವ ಇದೆ. ನಾವು ಅದನ್ನು ಕಲಿಯುತ್ತೇವೆ. ನೀವು ಕುಳಿತುಕೊಳ್ಳಿ. ನಿಮ್ಮಿಂದ ಏನೂ ಕಲಿಯುವ ಅಗತ್ಯವಿಲ್ಲ. ಬಿಜೆಪಿಯವರು ಪತ್ರಿಕೆಯಲ್ಲಿ ಬರಲಿ ಎಂದು ಮಾತನಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಕನ್ನಡದ ಬಗ್ಗೆ ಸ್ವಲ್ಪ ಟೈಮ್ ಕೊಡಿ; ಸ್ವಚ್ಛವಾದ ಕನ್ನಡವನ್ನು ಮಾತನಾಡುವುದನ್ನು ಅದಷ್ಟು ಬೇಗನೆ ತಾವು ಕಲಿತುಕೊಳ್ಳಿ. ಮಾನ್ಯ ಖಮರುಲ್ ಇಸ್ಲಾಂರವರೇ, ಸ್ವಚ್ಛವಾದ ಕನ್ನಡವನ್ನು ಮಾತನಾಡುವುದನ್ನು ಸ್ವಲ್ಪ ಬೇಗನೆ ಕಲಿತುಕೊಳ್ಳಿ.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ಹಿರಿಯ ಶಾಸಕರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ನೀವು ಯಾವ ರೀತಿ ಆಶ್ರಯ ಕಮಿಟಿಯಲ್ಲಿ ಸದಸ್ಯರುಗಳನ್ನು ಮಾಡುತ್ತಿದ್ದೀರಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಬಸವರಾಜುರವರು ಕೇಳಿರುವ ಪ್ರಶ್ನೆ ಏನೆಂದರೆ ಪ್ರತಿ ತಾಲ್ಲೂಕ್ಕಿಗೆ ಲಭ್ಯವಾಗಿರುವ ಮನೆಗಳೆಷ್ಟು? ಅದಕ್ಕೆ ಉತ್ತರ ಇಲ್ಲ. ಕೇಳಿರುವ ಪ್ರಶ್ನೆಬಿಟ್ಟು ಬಾಕಿ ಉತ್ತರ ಕೊಟ್ಟರೆ ಪ್ರಯೋಜನವೇನು?

ಶ್ರೀ ಖಮರುಲ್ ಇಸ್ಲಾಂ : ತಮಗೆ ಅದನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಮ್ಮದು ಇನ್ನೊಂದು ಪ್ರಶ್ನೆ ಇತ್ತು. ಅದೇನೆಂದರೆ ಇವತ್ತು ಆಶ್ರಯ ಸಮಿತಿಗಳನ್ನು ಮಾಡುವ ಸಂದರ್ಭದಲ್ಲಿ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ, ಅದರ ಬಗ್ಗೆ ಪ್ರಶ್ನೆ ಇಲ್ಲ. ಆದರೆ ಅಲ್ಲಿ ಆ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಯಲ್ಲಿ ಯಾವಾಗ ಛೇರ್ಮನ್‌ರು ಶಾಸಕರು ಇದ್ದ ಸಂದರ್ಭದಲ್ಲಿ ಅವರ ಚಾಯ್ಸ್ ಇದ್ದ ಸದಸ್ಯರನ್ನು ನೇಮಕ ಮಾಡುವುದು. ಆಯಾ ತಾಲ್ಲೂಕಿಗೆ ಆಯಾ ಶಾಸಕರು ಹೇಳಿದಂಥ ಸದಸ್ಯರನ್ನು ನೇಮಕ ಮಾಡುತ್ತಾರೋ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಕ್ಲಿಯರ್ ಮಾಡಬೇಕಾಗುತ್ತದೆ. ಅದನ್ನು ಅವರು ಹೇಳಲಿ.

SRI. QUMARUL ISLAM : Ashraya Committees will be constituted as early as possible.

ಅಧ್ಯಕ್ಷರು : ನಿಮ್ಮ ರಿಕ್ವೆಸ್ಟ್ ಏನು ಇದೆ, ಅದನ್ನು ಅವರು ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು ಎಲ್ಲಾ ಶಾಸಕರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿ ನಾವು ಆಶ್ರಯ ಸಮಿತಿಯನ್ನು ಮಾಡುತ್ತಿದ್ದೇವೆ, ನೀವು ಹೆಸರುಗಳನ್ನು ಕೊಡಿ ಎಂದು ಕೇಳಿದ್ದಾರೆ. ನಾವು ಹೆಸರುಗಳನ್ನು ಕೊಡುತ್ತೇವೆ. ಆ ಹೆಸರುಗಳ ಪ್ರಕಾರ ಅವರು ಮಾಡುತ್ತಾರೋ ಇಲ್ಲವೋ?

ಅಧ್ಯಕ್ಷರು : ಅದನ್ನು ಸರ್ಕಾರಕ್ಕೆ ಬಿಡಿ. ಮುಂದಿನ ಪ್ರಶ್ನೆ ಮಾನ್ಯ ಶಂಕರಲಿಂಗೇಗೌಡರದು.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ನಾವು ಎಲ್ಲಾ ಕ್ಯಾಟಗರಿಗೂ ಒಂದೊಂದು ಸ್ಥಾನವನ್ನು ಕೊಡುತ್ತಿದ್ದೇವೆ. ತಾವು ಹೆಸರುಗಳನ್ನು ಕೊಡಿ. ನಾನು ಬ್ಯಾಕ್‌ವರ್ಡ್, ಮೈನಾರಿಟಿ, ಜನರಲ್ ಕ್ಯಾಟೆಗೊರಿ, ವಿಮೆನ್, ಹೀಗೆ ಎಲ್ಲಾ ಕ್ಯಾಟೆಗೊರಿಯಲ್ಲೂ ಒಬ್ಬೊಬ್ಬರನ್ನು ನಾಮಿನೇಟ್ ಮಾಡುತ್ತಿದ್ದೇನೆ.

ಶ್ರೀ ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾ ಅವರ ಪ್ರಶ್ನೆಗೆ ಉತ್ತರ ಬರಲಿಲ್ಲ. ಈ ಹಿಂದೆ ಅಲಾಟ್ ಮಾಡಿದಂತಹ ಮನೆಗಳಿಗೆ...

ಅಧ್ಯಕ್ಷರು : ಅದನ್ನು ನಾನು ಹೇಳುತ್ತೇನೆ. ಮಾನ್ಯ ಖಮರುಲ್ ಇಸ್ಲಾಂ ಅವರೇ ಅವರ ಎರಡನೇ ಪ್ರಶ್ನೆ ಏನು ಇದೆ, ಒಂದೊಂದು ತಾಲ್ಲೂಕ್ಕಿಗೆ ಎಷ್ಟೆಷ್ಟು ಎಂದು ವಿವರ ಕೇಳಿದ್ದಾರೆ. ನೀವು ಆ ವಿವರ ಕೊಟ್ಟಿಲ್ಲ. ಆದಷ್ಟು ಬೇಗ ಆ ವಿವರಗಳನ್ನು ಎಲ್ಲಾ ಸದಸ್ಯರಿಗೆ ಒದಗಿಸಿ.

ರಾಷ್ಟ್ರೀಯ ಗೃಹ ಮಂಡಳಿ ವತಿಯಿಂದ ಸಹಾಯ

71 - ಶ್ರೀ ಶಂಕರಲೀಂಗೇಗೌಡ. ಹೆಚ್.ಎಸ್. (ಚಾಮರಾಜ) : ಮಾನ್ಯ ವಸತಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ರಾಷ್ಟ್ರೀಯ ಗೃಹ ಮಂಡಳಿ ಸಹಾಯದಡಿ ಮೈಸೂರು ತಾಲ್ಲೂಕು ಹೂಟಗಳ್ಳಿಯಲ್ಲಿ ನಿರ್ಮಿಸಲಾಗಿರುವ ವಿವಿಧ ಮಾದರಿಯ ಮನೆಗಳು ಅಪೂರ್ಣ ಸ್ಥಿತಿಯಲ್ಲಿರುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ. *ಈ ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು ಯಾವಾಗ? ಅಪೂರ್ಣಗೊಳ್ಳಲು ಕಾರಣಗಳೇನು (ವಿವರ ಒದಗಿಸುವುದು)*

ಇ. *ಈ ಮನೆಗಳ ನಿರ್ಮಾಣಕ್ಕೆ ಟೆಂಡರ್ ಕರೆದ ಸಂದರ್ಭದಲ್ಲಿ ಈ ಮನೆಗಳ ಬೆಲೆ ಎಷ್ಟಿತ್ತು. ಈಗ ಈ ಮನೆಗಳಿಗೆ ಮಂಜೂರಾತಿದಾರರು ಎಷ್ಟು ಬೆಲೆ ಪಾವತಿಸಬೇಕು.*

ಈ) *ಕರ್ನಾಟಕ ಗೃಹ ಮಂಡಳಿಯವರು ವಿಳಂಬ ಮಾಡಿದರೂ ಕೂಡ ಮಂಜೂರಾತಿದಾರರೇ ಹೆಚ್ಚು ಹಣವನ್ನು ಪಾವತಿಸಬೇಕು. ಈ ಮನೆಗಳ ಕಾಮಗಾರಿ ಕೆಲಸ ಪೂರ್ಣಗೊಳಿಸಿಕೊಡುವ ಬಗ್ಗೆ ಸರ್ಕಾರದ ನಿಲುವೇನು?*